ಒಬ್ಬ ಮಾನ್ಯ ಸದಸ್ಯರು :- ರಾಷ್ಟ್ರೀಕೃತ ಮಾರ್ಗಗಳಲ್ಲಿ, ಕರ್ನಾಟಕ ರಸ್ತೆ ಸಾರಿಗೆ, ಬಸ್ಸುಗಳನ್ನು ಓಡಿಸಲು ಖಾಸಗಿಯವರಿಗೆ ಏಕೆ ವಹಿಸಿಕೊಡಬಾರದು?

ತಡೆ ಹಿಡಿಯಲಾದ ಪ್ರಶ್ನೆಗಳು :

ವಿಷಯ :- ಮಾನ್ವಿ ಕ್ಷೇತ್ರದಲ್ಲಿ ವೈದ್ಯಾಧಿಕಾರಿಗಳ ನೇಮಕ

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 380 (2856)

ಶ್ರೀ ಗಂಗಾಧರ ನಾಯಕ್, (ಮಾನ್ವಿ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾನ್ವಿ ಕ್ಷೇತ್ರದಲ್ಲಿ ಕವಿತಾಳ ಚಲ್ಲಟಗಿ ಮತ್ತು ಕುರುಡ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳು ಇರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?

ಡಾ. ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ.

ಆ) ಸೇವಾ ನಿರತ ಸ್ನಾತಕೋತ್ತರ ವಿದ್ಯಾಭ್ಯಾಸದಿಂದ ಹಿಂದಿರುಗುವ ವೈದ್ಯರುಗಳು ಹಾಗೂ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯ ಸಂದರ್ಭದಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಹಾಗೂ ಕರ್ನಾಟಕ ಲೋಕ ಸೇವಾ ಆಯೋಗದಿಂದ ರಾಜ್ಯದ ಎಲ್ಲಾ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಗಂಗಾಧರ ನಾಯಕ :- ಮಾನ್ಯ ಸಚಿವರು ಹೇಳಿದ ಉತ್ತರ ಅಸಮರ್ಪಕವಾಗಿದೆ. ಸದರಿ ವೈದ್ಯಾಧಿಕಾರಿಗಳನ್ನು ಯಾವ ತಿಂಗಳಿನಲ್ಲಿ, ಯಾವ ದಿನಾಂಕದಲ್ಲಿ ಭರ್ತಿ ಮಾಡುತ್ತೀರಿ ಎಂಬುದನ್ನು ತಿಳಿಸಬೇಕಾಗಿ ಕೇಳುತ್ತೇನೆ.

ಡಾ. ಹೆಚ್. ಸಿ. ಮಹದೇವಪ್ಪ :- ಮಾನ್ಯ ಉಪಾಧ್ಯಕ್ಷರೇ, ಮಾನ್ವಿ ಕ್ಷೇತ್ರದ ಕವಿತಾಳ ಆರೋಗ್ಯ ಕೇಂದ್ರಕ್ಕೆ ಸುಮಾರು 2 ವೈದ್ಯರ ಹುದ್ದೆ ಮಂಜೂರಾತಿಯಾಗಿದೆ. ಇದರಲ್ಲಿ ಕಾಂಟ್ರಾಕ್ಟ್ ಆಧಾರದ ಮೇಲೆ ಒಬ್ಬರು ಮಹಿಳೆ ಮತ್ತು ಒಬ್ಬರು ಪುರುಷ ವೈದ್ಯರನ್ನು ನೇಮಕ ಮಾಡಲಾಗಿತ್ತು. ಒಬ್ಬ ವೈದ್ಯಾಧಿಕಾರಿ ಕೆಲಸ ಮಾಡುತ್ತಿದ್ದಾರೆ, ಮಹಿಳಾ ವೈದ್ಯಾಧಿಕಾರಿ ಗೈರು ಹಾಜರಾಗಿದ್ದಾರೆ. ಇನ್ನುಳಿದ ಎರಡು ಆರೋಗ್ಯ ಕೇಂದ್ರಗಳಾದ ಚಲ್ಲಟಗಿ ಮತ್ತು ಕುರುಡೆ ಕೇಂದ್ರಗಳಲ್ಲಿ ವೈದ್ಯರ ನೇಮಕ ಆಗಬೇಕಾಗಿದೆ. ಸ್ನಾತಕೋತ್ತರ ಪದವಿಯನ್ನು ಮುಗಿಸಿ ಬಂದಿರತಕ್ಕ ವೈದ್ಯರ ಪಟ್ಟಿ ಇದೆ. ಆ ಪಟ್ಟಿಯ ಪ್ರಕಾರ, ತಕ್ಷಣದಲ್ಲಿಯೇ, ಕಾಂಟ್ರಾಕ್ಟ್ ಆಧಾರದ ಮೇಲೆ, ಪ್ರತಿ ಜಿಲ್ಲೆಯಲ್ಲೂ ಖಾಲಿ ಇರತಕ್ಕ ವೈದ್ಯರ ನೇಮಕಾತಿ ಬಗ್ಗೆ, ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಸುಮಾರು 9 ಜಿಲ್ಲೆಗಳಿಂದ ಪಟ್ಟಿ ಬಂದಿದೆ. ಇನ್ನೂ 9 ಜಿಲ್ಲೆಗಳಿಂದ ಶೀಘ್ರದಲ್ಲಿಯೇ ಪಟ್ಟಿಯನ್ನು ತರಿಸಿ, ಖಾಲಿ ಇರತಕ್ಕ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವೈದ್ಯರನ್ನು ತುಂಬಲಾಗುವುದು.

ವಿಷಯ :- ಸಂತಾನ ನಿರೋಧ ಶಸ್ತ್ರ ಚಿಕಿತ್ಸೆ ಪ್ರೋತ್ಸಾಹ ಧನ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 382 (2888)

ಶ್ರೀಮತಿ ಎನ್. ಜ್ಯೋತಿ ರೆಡ್ಡಿ (ಗೌರಿಬಿದನೂರು) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂತಾನ ನಿರೋಧ ಶಸ್ತ್ರ ಚಿಕಿತ್ಸೆಗೆ ಒಳಪಟ್ಟಿರುವವರಿಗೆ ಸರ್ಕಾರದಿಂದ ಕೊಡುವ ಸಹಾಯ ಧನ ಎಷ್ಟು?

ಆ) ಇದರಲ್ಲಿ ಔಷಧಿಗಳಿಗೆ ವಿರ್ಚಾಗುವ ಮೊಬಲಗು ಎಷ್ಟು?

ಇ) ಶಸ್ತ್ರ ಚಿಕಿತ್ಸೆಗೆ ಉಪಯೋಗಿಸುವ ದಾರ ಸರ್ಕಾರದಿಂದ ಒದಗಿಸಲಾಗುವುದೇ?

ಡಾ. ಶ್ರೀ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 180 ಹಾಗೂ ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 200 ನ್ನು ಸರ್ಕಾರ ನೀಡುತ್ತದೆ.

ಆ) ಔಷಧಿಗೆಂದು ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 15.00 ಹಾಗೂ ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ರೂ. 25.00 ವಿರ್ಚಾಗುವುದು.

ಇ) ಹೌದು.

ಶ್ರೀಮತಿ ಎನ್. ಜ್ಯೋತಿರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಪುರುಷ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ 15 ರೂಪಾಯಿ ಮತ್ತು ಮಹಿಳಾ ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ 25 ರೂಪಾಯಿಗಳನ್ನು ಔಷಧಿಗೆ ವಿರ್ಚಾಗುತ್ತದೆಂದು ಹೇಳಿದ್ದಾರೆ. If my knowledge is correct, it was fixed in the year 1960. My humble request is to enhance this amount because it is not sufficifient for the patients. ಆಗ ಪೆನ್ಸಿಲಿನ್ ರೇಟ್ 75 ಪೈಸೆ ಇತ್ತು. Now it costs Rs. 3 to Rs. 4. ಹಾಗಾಗಿ, ಆವರಿಗೆ ಸರಿಯಾದಂಥ ಆ್ಯಂಟಿಬಯೋಟಿಕ್ಸ್ ಕೊಡತಕ್ಕ ವ್ಯವಸ್ಥೆಯನ್ನು ಮಾಡಿಲ್ಲ, ಇದು ಸರ್ಕಾರಿ ಆಸ್ಪತ್ರೆಗಳಲ್ಲಿ ನಡೆಯುತ್ತಾ ಇಲ್ಲ. ಆದ್ದರಿಂದ, ದಯವಿಟ್ಟು ಇದನ್ನು ಹೆಚ್ಚುಮಾಡಬೇಕೆಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ, ಶಸ್ತ್ರ ಚಿಕಿತ್ಸೆಗೆ ಉಪಯೋಗಿಸುವ ದಾರವನ್ನು ಸರ್ಕಾರದಿಂದಲೇ ಒದಗಿಸುವುದಾಗಿ ಉತ್ತರ ಕೊಟ್ಟಿದ್ದಾರೆ. ಆದರೆ, ಆಸ್ಪತ್ರೆಗಳಲ್ಲಿ, ಇದನ್ನು ರೋಗಿಗಳೇ ತರಬೇಕೆಂದು ಹೇಳು ತ್ತಿದ್ದಾರೆ. ಎಷ್ಟೋ ಸಾರಿ ನಾವು ಮೋಟಿವೇಟ್ ಮಾಡಿ ಕಳುಹಿಸಿದಂತಹ ಹೆಣ್ಣು ಮಕ್ಕಳಿಗೆ ಕ್ಯಾಟ್‌ಗಾಟ್‌ನ್ನು ನಾವೇ ಕೊಡಿಸಿರುವಂತಹ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಆದ್ದರಿಂದ ಇದರ ಬಗ್ಗೆ ಕೂಡ ಸೀರಿಯಸ್ ಆಕ್ಷನ್ ತೆಗೆದುಕೊಳ್ಳಬೇಕು.